ಚಂದ್ರಗುತ್ತಿ ಜಾತ್ರೆಯ ಬಗ್ಗೆ

೯೪೩. (೧) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿ ಮಾರ್ಚ್ ತಿಂಗಳಲ್ಲಿ ವಾರ್ಷಿಕ ಜಾತ್ರೆ ನಡೆಯಲಿರುವುದೇ ?

ಆ) ಈ ಬಗ್ಗೆ ಸರ್ಕಾರದವರು ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದಾರೆ ?

ಇ) ಕಳೆದವರ್ಷ ಚಂದ್ರಗುತ್ತಿ ಜಾತ್ರೆಯಲ್ಲಿನಡೆದ ಅನಾಹುತಗಳ ಬೈಕಿ ಸರ್ಕಾರದವರು ವಿಚಾರಣೆ ನಡೆಸಿದ್ದಾರೆಯೇ ಹಾಗಿದ್ದಲ್ಲಿ ಆ ವರದಿಯ ವಿವರಗಳೇನು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಇಲ್ಲ

ಆ) ಚಂದ್ರಗುತ್ತಿಯಲ್ಲಿ ವಾರ್ಷಿಕ ಜಾತ್ರೆಯನ್ನು ಒಂದು ವರ್ಷಗಳ ಕಾಲ ಸರ್ಕಾರದಿಂದ ರದ್ದು ಮಾಡಲಾಗಿದೆ.

ಇ) ಚಂದ್ರಗುತ್ತಿಯಲ್ಲಿ ದಿನಾಂಕ ೨೦-೩-೧೯೮೬ ರಂದು ಸಂಭವಿಸಿದ ಘಟನೆಗಳಬಗ್ಗೆ ತನಿಖೆ ನಡೆಸಲು ಒಂದು ತನಿಖಾ ಆಯೋಗವನ್ನು ರಚಿಸಲಾಗಿತ್ತು. ತನಿಖಾ ಆಯೋಗವು ಈ ವಿಷಯದ ಬಗ್ಗೆ ವಿಚಾರಣೆನಡೆಸಿ ದಿನಾಂಕ ೧೮-೨-೧೯೮೭ ರಂದು ತನ್ನ ವರದಿಯನ್ನು ಸಲ್ಲಿಸಿತು. ಮತ್ತು ಅದನ್ನು ಸರ್ಕಾರವು ಅಂಗೀಕರಿಸಲಾಗಿದೆ. ವರದಿಯ ಮುದ್ರಿತ ಪ್ರತಿಯನ್ನು ದಿನಾಂಕ ೨-೩-೮೭ ರಂದು ವಿಧಾನ ಸಭೆಯ ಮುಂದೆ ತನಿಖಾ ಆಯೋಗವು ಸದರಿ ವರದಿಯಲ್ಲಿ ಮಾಡಿದ ಶಿಫಾರಸ್ಸಿನ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮವನ್ನು ತೋರಿಸುವ ಮೆಮೊರಾಂಡದ ಪ್ರತಿಯೊಡನೆ ಮಂಡಿಸಲಾಯಿತು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಗ್ಗೆ.

೯೧೫. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರತಿ ದಿವಸವು ಓಡಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು, ಕಳೆದ ಒಂದು ವರ್ಷದಲ್ಲಿ ಎಷ್ಟು ಬಸ್ಸುಗಳ ಅಪಘಾತವಾಗಿದೆ ?

ಆ) ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು ?

ಇ) ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಯಾವುದಾದರೂ ನೇಮಕಾತಿ ಸಮಿತಿ ಇದೆಯೇ, ಹಾಗೂ ಈ ಖಾಲಿ ಇರುವ ಹುದ್ದೆಗಳೆಷ್ಟು ?

ಶ್ರೀ ವೀರಣ್ಣ (ಸಾರಿಗೆ ಸಣ್ಣ ಉಳಿತಾಯ ಮತ್ತು ಬಂಧೀಖಾನೆ ಮಂತ್ರಿಗಳು).—

ಅ) ೬೫೯೬ ವಾಹನಗಳು

೧೮೧೯ ಅಪಘಾತಗಳು

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ದಿನಾಂಕ ೩೧-೧೨-೧೯೮೬ ರಲ್ಲಿಯಂತೆ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಒಟ್ಟು ೪೪,೨೧೧.

ಇ) ಕೇಂದ್ರ ಕಛೇರಿ ಮತ್ತು ವಿಭಾಗ ಮಟ್ಟಗಳಲ್ಲಿ ನೇಮಕಾತಿ ಸಮಿತಿಗಳನ್ನು ನಿಯಮಾವಳಿ ಅನುಸಾರ ರಚಿಸಲಾಗಿದೆ. ಸಂಸ್ಥೆಯಲ್ಲಿ ಪ್ರಸ್ತುತ ೪೬೫೦ ವಿವಿಧ ದರ್ಜೆಯ ಹುದ್ದೆಗಳು ಖಾಲಿ ಇರುತ್ತವೆ.